ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:72:ಯೋಜನೆ:2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:16-03-2018

# ಸುತ್ತೋಲೆ

ವಿಷಯ: ಯೋಜನಾ ವಿಭಾಗದಿಂದ ಬಿಡುಗಡೆಯಾದ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವ ಬಗ್ಗೆ.
ಉಲ್ಲೇಖ: ಈ ಕಛೇರಿ ಆದೇಶ ಸಂಖ್ಯೆ:ಕಾಶಿಇ:09:ಯೋಜನೆ:ಅ.ಬಿ:2017-18, ದಿ:10.07.2017, 28.10.2017, 13.12.2017, 01.02.2018, 06.02.2018, 12.02.2018, 05.03.2018 ಮತ್ತು 09.03.2018

--*--

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2017-18ನೇ ಸಾಲಿನಲ್ಲಿ ಉಲ್ಲೇಖಿತ ಆದೇಶಗಳಲ್ಲಿ ಲೆಕ್ಕಶೀರ್ಷಿಕೆ 2202-03-103-2-01 ಉಪಲೆಕ್ಕಶೀರ್ಷಿಕೆ (041) (052) (059) ಮತ್ತು (071) ರಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಹಾಗೂ ಲೆಕ್ಕಶೀರ್ಷಿಕೆ 2202-03-103-2-08 (051) ಅಡಿಯಲ್ಲಿ ವಿದ್ಯಾರ್ಥಿನಿಲಯಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಪ್ರತಿ ಆದೇಶದಲ್ಲಿಯೂ ಅನುದಾನ ಬಳಸಿಕೊಂಡು ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಆದರೂ ಸಹ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ಅನುದಾನವನ್ನು ಬಳಸಿಕೊಂಡು ಇದುವರೆವಿಗೂ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದಿಲ್ಲ. ಮಹಾಲೇಖಪಾಲರ ಲೆಕ್ಕ ತಪಾಸಣೆಗೆ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕಾಗಿರುವುದರಿಂದ ಉಲ್ಲೇಖಿತ ಆದೇಶಗಳಲ್ಲಿ ಬಿಡುಗಡೆಯಾದ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರಗಳನ್ನು ಕೆಳಕಂಡ ನಮೂನೆಯಲ್ಲಿ ಕೂಡಲೇ ಸಲ್ಲಿಸುವಂತೆ ಸೂಚಿಸಲಾಗಿದೆ.

**ನಮೂನೆ**

ರೂ.ಗಳಲ್ಲಿ

| ಕ್ರ.ಸಂಖ್ಯೆ | ಅನುದಾನ ಬಿಡುಗಡೆ ಆದೇಶ ಸಂಖ್ಯೆ ಮತ್ತು ದಿನಾಂಕ | ಬಿಡುಗಡೆಯಾದ ಅನುದಾನದ ಮೊತ್ತ | ಖರ್ಚಾದ ಅನುದಾನದ ಮೊತ್ತ | ಉಳಿಕೆ ಅನುದಾನ |
|---|---|---|---|---|
| | | | | |

19/3/18

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಅಗತ್ಯ ಕ್ರಮಕ್ಕಾಗಿ
2. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ-ಈ ಬಗ್ಗೆ ಗಮನಹರಿಸಲು

ಪ್ರತಿಯನ್ನು:

1. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು
   – ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು.
2. ಕಛೇರಿ ಪ್ರತಿ.

Plan_72_2017-18_UCs